# ಪೂನಂ ಪಾಂಡೆಯ ಹೊಸ ಅವತಾರ

‘ವಿವಾದಾತ್ಮಕ ಮಾಡೆಲ್’ ಪೂನಂ ಪಾಂಡೆಯ ಬಾಲಿವುಡ್ ರಂಗಪ್ರವೇಶಕ್ಕೆ ಸಿದ್ಧತೆ ಆರಂಭವಾಗಿದೆ. ಈಗಾಗಲೆ ಬಿಚ್ಚಾಟದಲ್ಲಿ ಬಾಲಿವುಡ್‌ನ ಬಹುತೇಕ ತಾರೆಯರನ್ನು ಹಿಂದಿಕ್ಕಿರುವ ಪೂನಂ, ಇದೀಗ ತನ್ನ ಚೊಚ್ಚಲ ಹಿಂದಿ ಚಿತ್ರದಲ್ಲೂ ಸಾಕಷ್ಟು ‘ಓಪನ್’ ಆಗಿದ್ದಾಳಂತೆ. ‘ಇದು ವಯಸ್ಕರ ಚಿತ್ರ’ ಎಂದು ಆಕೆಯೇ ಸುದ್ದಿ ಹಬ್ಬಿಸಿದ್ದಾಳೆ. ‘ಈ ಚಿತ್ರದಲ್ಲಿ ನನ್ನ ಪಾತ್ರ ಸಾಕಷ್ಟು ಬೋಲ್ಡ್ ಆಗಿದೆ. ತೀವ್ರತೆಯ ಹಲವು ಸನ್ನಿವೇಶಗಳಿವೆ. ಆದರೆ ಸೆನ್ಸಾರ್‌ನವರಿಂದ ತೊಂದರೆ ಆಗಲಿಕ್ಕಿಲ್ಲ ಎಂಬ ಭರವಸೆಯೂ ನನಗಿದೆ’ ಎಂದು ಪೂನಂ ಹೇಳಿರುವುದು ಪ್ರೇಕ್ಷಕರಲ್ಲಿ ಈಗಾಗಲೆ ಕುತೂಹಲ ಹುಟ್ಟಿಸಿದೆ.

ಕಿಂಗ್‌ಫಿಶರ್ ಕ್ಯಾಲೆಂಡರ್‌ನಲ್ಲಿ ಮೊತ್ತ ಮೊದಲಿಗೆ ಬೆತ್ತಲೆಯಾಗಿ ಕಾಣಿಸಿಕೊಂಡ ಪೂನಂ ಪಾಂಡೆ, ಆ ಬಳಿಕ ಪದೇ ಪದೇ ಬೆತ್ತಲೆಯಾಗುವ ಬೆದರಿಕೆ ಒಡ್ಡುತ್ತಲೇ ಬಂದಿದ್ದಾಳೆ. ಕಳೆದ ವರ್ಷ ‘ಭಾರತ ಕ್ರಿಕೆಟ್ ತಂಡ ವಿಶ್ವಕಪ್ ಗೆದ್ದರೆ ತಂಡದ ಎಲ್ಲ ಆಟಗಾರರ ಮುಂದೆ ಬೆತ್ತಲೆಯಾಗುತ್ತೇನೆ’ ಎಂದು ಹೇಳಿಕೆ ನೀಡಿ, ಆ ಬಳಿಕ ಪೊಲೀಸರಿಂದ ತನಿಖೆ ಎದುರಿಸಿದವಳು ಈಕೆ. ಶಾರೂಕ್ ಖಾನ್‌ನ ಕೋಲ್ಕತ್ತಾ ನೈಟ್ ರೈಡರ್ಸ್ ಐಪಿಎಲ್ ಟ್ರೋಫಿ ಗೆದ್ದಾಗ ಬೆತ್ತಲೆಯಾಗುವುದಾಗಿ ಹೇಳಿ, ಕೊನೆಗೆ ಟ್ವಿಟ್ಟರ್‌ನಲ್ಲಿ ತನ್ನ ಬೆತ್ತಲೆ ಫೋಟೊ ಹಾಕಿಕೊಂಡಿದ್ದಳು.

ಬಾಲಿವುಡ್‌ನಲ್ಲಿ ಇತ್ತೀಚೆಗೆ ಬಿಸಿ ಬಿಸಿ ದೃಶ್ಯಗಳಿಂದಾಗಿ ಸುದ್ದಿ ಮಾಡಿದ ‘ಜಿಸ್ಮ್’ ಚಿತ್ರದ ನಿರ್ದೇಶಕ ಅಮಿತ್ ಸಕ್ಸೇನಾ, ಪೂನಂ ಪಾಂಡೆಯ ಈ ಹೊಸ ಚಿತ್ರವನ್ನು ನಿರ್ದೇಶಿಸುತ್ತಿದ್ದಾನೆ. ‘ಇಬ್ಬರೂ ಒಟ್ಟು ಸೇರಿದರೆ ಈ ಸಿನಿಮಾದಲ್ಲಿ ಉಳಿಯೋದು ಸೆಕ್ಸೇನಾ?’ ಎಂದು ಯಾರಾದರೂ ಪ್ರಶ್ನಿಸಿದರೆ ಉತ್ತರ ಕೊಡುವುದು ಕಷ್ಟ. ಆದರೆ ಬಾಲಿವುಡ್‌ನಲ್ಲಿ ‘ಸೆಕ್ಸೇ ಸಕ್ಸಸ್ ಮಂತ್ರ’ ಎಂದು ನಂಬಿರುವ ನಿರ್ಮಾಪಕರು ಇರುವವರೆಗೆ ಪೂನಂಳಂತಹ ಬಿಚ್ಚಾಟದ ರಾಣಿಗೆ ತೊಂದರೆ ಇಲ್ಲ.

■ ಬಿಂದು






Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65